Reg. No. 

# BBMKAL 103

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಬಿ.ಎಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2014
## ಕನ್ನಡ ಭಾಷಾ ಪತ್ರಿಕೆ – I
## (2013-14 Batch and Onwards)

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

### ಭಾಗ ೧ – ಕಾವ್ಯ

I. ಅ) ಒಂದಕ್ಕೆ ಉತ್ತರಿಸಿರಿ : (1×8=8)

1) ಯುದ್ಧೋನ್ಮುಖರಾದ ಯೋಧರು ಸೇನಾ ಶಿಬಿರಗಳಲ್ಲಿ ತಮ್ಮ ತಮ್ಮ ಮನೋಭಿಲಾಷೆಗಳನ್ನು ನಿವೇದಿಸಿಕೊಳ್ಳುವ ಸಂದರ್ಭವನ್ನು ವಿವರಿಸಿರಿ.

2) ವಸಿಷ್ಠ–ವಿಶ್ವಾಮಿತ್ರರ ಸಂವಾದದ ಸ್ವಾರಸ್ಯವನ್ನು ಕುರಿತು ಬರೆಯಿರಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) 'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ಮೂಡಿಬಂದ ಅನ್ಯ ವಿಮರ್ಶೆ ಹಾಗೂ ಆತ್ಮ ವಿಮರ್ಶೆಗಳ ಕುರಿತು ಬರೆಯಿರಿ.

2) 'ಬಾಳೊಂದು ವಿಜಯದ ಬೀಡು' ಮುಕ್ತಕಗಳ ವೈಶಿಷ್ಟ್ಯವನ್ನು ವಿವರಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×3=6)

1) ಭಗೀರಥ.

2) ಹರಿಹರ ಮಹತ್ವ.

3) ಎಂ. ಗೋಪಾಲಕೃಷ್ಣ ಅಡಿಗ.

II. ಅ) ಒಂದು ಪದ್ಯದ ಸಂದರ್ಭದೊಂದಿಗೆ ಭಾವಾರ್ಥವನ್ನು ವಿಶದಪಡಿಸಿರಿ : (1×5=5)

1) ಗಂಗಾಳ ತುಂಬ ಗಂಜಿಯನಿಟ್ಟು ಕುಳಿತಿದ್ದಾಳೆ
ಗಂಗಜ್ಜಿ ಅಂಗಾಂಗ ಸುಕ್ಕಿ ಸೊರಗಿ ;
ಮುಟ್ಟಲಾರಳು ತೊಟ್ಟು, ಕಣ್ಣ ಮುಂದೆ ಕಟ್ಟಿದೆ ಅಲ್ಲಿ
ಕುರುಕ್ಷೇತ್ರಗಳ ರುಂಡ ರಕ್ತವೇಣಿ.

2) ಶೋಕವನು ಗೈಯುವರು ಸತಿಸುತರು ಬಾಂಧವರು

ಜೋಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ

ಲೋಕದೊಳು ಗಳಿಸಿರ್ದಪುಣ್ಯಪಾಪಗಳೆರಡು

ಸಾಕಾರವಾಗಿ ಸಂಗಡ ಬಾಹೊವಲ್ಲದೆ.

ಆ) ಎರಡು ಸಾಲುಗಳಿಗೆ ಸಂದರ್ಭ ಬರೆದು ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ಬಾವಿ ಮುಟ್ಟದಿದ್ದರೂ ಅದರ ತಳದಲ್ಲಿ ಹೆಜ್ಜೆಗಳು ಹಾಗೆ ಉಳಿದು ಬಿಟ್ಟಿವೆ.

2) ಅಸತ್ಯವನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲ.

3) ಜೋಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ.

III. ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ : **(5×1=5)**

1) ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಬಂಡಾಯ ಕವಿಗೋಷ್ಠಿಯ ಅಧ್ಯಕ್ಷರು ಯಾರು ?

2) 'ನಿತ್ಯೋತ್ಸವ'ದ ಕವಿಯೆಂದೇ ಪರಿಚಿತರಾದವರು ಯಾರು ?

3) 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಆದಿಕವಿ ಪಂಪನನ್ನು ಮುಕ್ತ ಕಂಠದಿಂದ ಹೊಗಳಿದ ಕವಿ ಯಾರು ?

4) 'ಅತಿ ಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯನುನ್ನತ ಯತಿವರನು' ಎಂದು ಪ್ರತಿಪಾದಿಸಿದ ನಡುಗನ್ನಡ ಕವಿ ಯಾರು ?

5) ಪುರಂದರ ದಾಸರ ಪೂರ್ವಾಶ್ರಮದ ಹೆಸರೇನು ?

## ಭಾಗ ೨ – ಗದ್ಯ

IV. ಅ) ಒಂದಕ್ಕೆ ಉತ್ತರಿಸಿರಿ : **(1×8=8)**

1) ದೇವರೇ ಬರಲಿಲ್ಲ – ಕಥೆಯಲ್ಲಿ ಬರುವ ನಳಿನ ಹಾಗೂ ವಿಮಲಳ ಬದುಕಿನ ನೋವುಗಳನ್ನು ಚಿತ್ರಿಸಿರಿ.

2) 'ಪ್ರಭುಸಮ್ಮಿತ' ಕತೆಯ ಆಶಯವನ್ನು ವಿವರಿಸಿರಿ.

ಆ) ಒಂದಕ್ಕೆ ಉತ್ತರಿಸಿರಿ : **(1×8=8)**

1) ವೈವಿಧ್ಯಗಳನ್ನು ತೊಡೆದು ಹಾಕಿ ಏಕರೂಪಿ 'ಸಂಸ್ಕೃತಿ'ಯನ್ನು ಛಾಪಿಸುವ ವ್ಯವಸ್ಥೆಯನ್ನು 'ಹುಲಿಸವಾರಿ'ಯಲ್ಲಿ ಕಾಣಬಹುದೆಂಬ ಹೇಳಿಕೆಯನ್ನು ವಿಶ್ಲೇಷಿಸಿರಿ.

2) ವಿ.ಸೀ.ಯವರು ಸಾಹಿತ್ಯಪರರೇ ಹೊರತು ಶಾಸ್ತ್ರಪರರಲ್ಲ ಎಂಬ ಹೇಳಿಕೆಯನ್ನು ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿರಿ.

ಇ) **ಒಂದಕ್ಕೆ** ಉತ್ತರಿಸಿರಿ : (1×5=5)

1) 'ಸ್ವಲ್ಪ ಹಣ ಮತ್ತು ಒಬ್ಬ ಮನುಷ್ಯ' ಲೇಖನದ ಆಶಯವನ್ನು ಸಂಗ್ರಹಿಸಿರಿ.

2) 'ಪುಟ್ಟಗುಬ್ಬಿ ಕೇಳಿದ ದೊಡ್ಡ ಪ್ರಶ್ನೆ. . .' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿರಿ.

V. ಯಾವುದಾದರೂ **ಒಂದಕ್ಕೆ** ಟಿಪ್ಪಣಿ ಬರೆಯಿರಿ : (1×5=5)

1) ಶಬ್ದಮಾಲಿನ್ಯ ಹಾಗೂ ಆರೋಗ್ಯದ ವಿಚಾರವಾಗಿ ಬರೆಯಿರಿ.

2) ಕಷ್ಟದಲ್ಲಿರುವಾಗ ಯಾರೋ ಒಬ್ಬರು ಆಡಿದ ಮಾತು ಅಮೃತ ಸತ್ವವಾಗಬಲ್ಲುದು.

3) ಲೋಕ ಕಲ್ಯಾಣಕ್ಕೆ ಸೌಮನಸ್ಯವೇ ಮೂಲಧಾತು.

VI. **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ಡಾ. ವಿ. ಸೀತಾರಾಮಯ್ಯನವರ ಊರು ಯಾವುದು ?

2) 'ಸಕ್ಕರೆ ಗೊಂಬೆ' ನಾಟಕದ ಕರ್ತೃ ಯಾರು ?

3) ಡಾ|| ನಾ. ಮೊಗಸಾಲೆಯವರು ಎಲ್ಲಿ ನೆಲೆಸಿದ್ದಾರೆ ?

4) 'ಮೂವತ್ತು ಮಳೆಗಾಲ' ಎಂಬುದು ಯಾರ ಸಮಗ್ರ ಕಾವ್ಯ ?

## ಭಾಗ ೩ – ಕ್ರಿಯಾತ್ಮಕ ಕನ್ನಡ

VII. **ಒಂದಕ್ಕೆ** ಉತ್ತರಿಸಿರಿ : (1×8=8)

1) ಜಾಹೀರಾತುಗಳ ಉದ್ದೇಶ ಮತ್ತು ಪಾತ್ರಗಳನ್ನು ಕುರಿತು ಬರೆಯಿರಿ.

2) ಅಭ್ಯರ್ಥನ ಪತ್ರ ಎಂದರೇನು ವಿವರಿಸಿ ಮಾದರಿ ಪತ್ರವೊಂದನ್ನು ಬರೆಯಿರಿ.

VIII. **ಒಂದಕ್ಕೆ** ಉತ್ತರಿಸಿರಿ : (1×5=5)

1) ಸಂಘ ಸಂಸ್ಥೆಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆಯ ಲಕ್ಷಣಗಳನ್ನು ಬರೆದು ಮಾದರಿ ಪತ್ರವೊಂದನ್ನು ನೀಡಿರಿ.

2) ಓದುಗರ ಪತ್ರಗಳು/ವಾಚಕರ ವಾಣಿ ಎಂದರೇನು ? ಮಾದರಿ ಪತ್ರದ ಸಹಿತ ವಿವರಿಸಿರಿ.

IX. **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) 'ಸ್ಕೂಟರ್'ನ ಘೋಷ ವಾಕ್ಯವೇನು ?

2) ಮಾರುಕಟ್ಟೆ ನಿರ್ವಹಣೆಯ ಪ್ರಬಲ ಅಸ್ತ್ರ ಯಾವುದು ?

---